ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ
ವಿಶ್ವವಿದ್ಯಾಲಯ, ಬೀದರ

ಭಾ.ಕೃ.ಸಂ.ಪ. – ಕೃಷಿ ವಿಜ್ಞಾನ ಕೇಂದ್ರ, ದ.ಕ., ಕಂಕನಾಡಿ, ಮಂಗಳೂರು – 575 002

# ಹೆಸರು ಬೆಳೆಯ ಬೇಸಾಯ ಕ್ರಮಗಳು (ಬಿ.ಜಿ.ಎಸ್.–9)

**ಲೇಖಕರು**

**ಡಾ. ನವೀನ್ ಕುಮಾರ್, ಬಿ. ಟಿ., ಡಾ. ಟಿ. ಜೆ. ರಮೇಶ,
ಡಾ. ಶಿವಕುಮಾರ್, ಆರ್., ಡಾ. ಕೇದರನಾಥ, ಡಾ. ಮಲ್ಲಿಕಾರ್ಜುನ, ಎಲ್.,
ಡಾ. ಚೇತನ್, ಎನ್., ಡಾ. ರಶ್ಮಿ**

ಹೆಸರು ಕಡಿಮೆ ಅವಧಿಯ ದ್ವಿದಳ ಧಾನ್ಯದ ಬೆಳೆಯಾಗಿದೆ. ಸುಮಾರು 70 ದಿವಸಗಳಲ್ಲಿ ಕೊಯ್ಲಿಗೆ ಬರುವುದರಿಂದ ಕರಾವಳಿಯಲ್ಲಿ ಭತ್ತದ ಕಟಾವಿನ ನಂತರ ಸುಗ್ಗಿ ಹಿಂಗಾರು ಮತ್ತು ಬೇಸಿಗೆಯಲ್ಲಿ ಎರಡು ಬೆಳೆಯನ್ನು ಬೆಳೆಯಬಹುದು.ಇದರಲ್ಲಿ ಶೇಕಡ 24.5ರಷ್ಟು ಉತ್ತಮ ಗುಣಮಟ್ಟದ ಸಸಾರಜನಕವಿದ್ದು, ಇತರ ಬೇಳೆಕಾಳಿಗಿಂತ ಇದು ಸುಲಭವಾಗಿ ಜೀರ್ಣವಾಗುತ್ತದೆ. ಹೆಸರಿನಲ್ಲಿ ಸುಣ್ಣ, ಕಬ್ಬಿಣ, ಪೊಟ್ಯಾಷಿಯಂನ ಹೆಚ್ಚಿನ ಪ್ರಮಾಣವಿದ್ದು ವಿಟಮಿನ್ 'ಎ' ಸಹ ಇದರಲ್ಲಿದೆ. ಇದು ವಾತಾವರಣದ ಸಾರಜನಕವನ್ನು ಸ್ವೀಕರಿಸಿ ಮಣ್ಣು ಕೊಚ್ಚಣೆಯನ್ನು ತಡೆಯುವುದರಿಂದ ಹಸಿರೆಲೆ ಗೊಬ್ಬರವಾಗಿಯೂ ಬೆಳೆಯಬಹುದು ಹಾಗೂ ಜಾನುವಾರುಗಳಿಗೆ ಮೇವಾಗಿಯೂ ಬಳಕೆ ಮಾಡಬಹುದು.

**ಬಿತ್ತನೆಗೆ ಸೂಕ್ತವಾದ ಭೂಮಿ :** ಮಧ್ಯಮದಿಂದ ಆಳವಾದ ಕಪ್ಪು ಭೂಮಿ.

**ತಳಿ :** ಬಿ.ಜಿ.ಎಸ್. – 9

**ತಳಿಯ ವಿಶೇಷ ಗುಣಗಳು :**

1. ಇದು ಉದ್ದನೆಯ ಕಾಯಿ ಹೊಂದಿದೆ.
2. ಕಾಳು ದಪ್ಪವಾಗಿದ್ದು ಮಿಂಚು ಹಸಿರು ಬಣ್ಣದಾಗಿದೆ.
3. ಮಜ್ಜಿಗೆ ರೋಗ ತಡೆದುಕೊಳ್ಳುವ ಶಕ್ತಿ ಇದೆ.
4. 100 ಕಾಳಿನ ತೂಕ (4.7 ಗ್ರಾಂ.)
5. ನೆಟ್ಟಗೆ ಬೆಳೆಯುವದರಿಂದ ಯಂತ್ರದಿಂದ ಕಟಾವು ಮಾಡಲು ಸೂಕ್ತವಾಗಿದೆ.

**ಬೀಜೋಪಚಾರ :**

1) ಬೀಜಗಳಲ್ಲಿ ಬರ ನಿರೋಧಕತೆ ಹೆಚ್ಚಿಸಲು ಬೀಜಗಳನ್ನು ಶೇಕಡಾ 2ರ ಕ್ಯಾಲ್ಸಿಯಂಕ್ಲೋರೈಡ್ ದ್ರಾವಣದಲ್ಲಿ 1 ತಾಸು ನೆನೆಸಿ ನೆರಳಿನಲ್ಲಿ ಕನಿಷ್ಟ 7 ತಾಸು ಒಣಗಿಸಬೇಕು.

2) ರೈಜೋಬಿಯಂ @200 ಗ್ರಾಂ. / ಎಕರೆಗೆ.

**ಬಿತ್ತನೆ ಅಂತರ : 30 x10 ಸೆ.ಮೀ.**

**ಬಿತ್ತನೆ ಬೀಜ : (ಎಕರೆಗೆ) – ಇಡಿ ಬೆಳೆ : 6.0 ಕಿ.ಗ್ರಾಂ. ಮಿಶ್ರ ಬೆಳೆ : 5.0 ಕಿ.ಗ್ರಾಂ.**

ಸಾವಯವ ಗೊಬ್ಬರ (ಎಕರೆಗೆ) ಕೊಟ್ಟಿಗೆ / ಕಾಂಪೋಸ್ಟ್ ಗೊಬ್ಬರ : 2.0 ಟನ್ (ಬಿತ್ತನೆಗೆ 3–4 ವಾರಗಳ ಮೊದಲು ಮಣ್ಣಿನಲ್ಲಿ ಸೇರಿಸಬೇಕು)

ರಾಸಾಯನಿಕ ಗೊಬ್ಬರ (ಎಕರೆಗೆ) ಸಾರಜನಕ 10 ಕೆ.ಜಿ. ರಂಜಕ : 20 ಕೆ.ಜಿ. ಅಂದರೆ (ಯೂರಿಯಾ 4.4 ಕಿ.ಗ್ರಾಂ. ಮತ್ತು ಡಿ.ಎ.ಪಿ 44 ಗ್ರಾಂ) ಗಂಧಕ : 8 ಕೆ.ಜಿ. (40 ಕಿ.ಗ್ರಾಂ. ಜಿಪ್ಸಂ ಮೂಲಕ)

ರಾಸಾಯನಿಕ ಗೊಬ್ಬರ ಹಾಕುವ ವಿಧಾನ : ಬೀಜ ಮತ್ತು ರಾಸಾಯನಿಕ ಗೊಬ್ಬರಗಳನ್ನು ಏಕ ಕಾಲಕ್ಕೆ ಬಿತ್ತುವ ಕೂರಿಗೆಯಿಂದ ಬಿತ್ತುವಾಗ ಶಿಫಾರಿಸಿದ ಎಲ್ಲಾ ರಸಗೊಬ್ಬರಗಳನ್ನು ಹಾಕಬೇಕು.

ಕಳೆ ನಿರ್ವಹಣೆ ಇಡಿ ಬೆಳೆಯಲ್ಲಿ ಬಿತ್ತಿದ ದಿನ ಅಥವಾ ಮರುದಿನ ಪ್ರತಿ ಲೀಟರ್ ನೀರಿಗೆ 4.3 ಮಿ.ಲೀ. ಪಂಡಿಮಿಥಾಲಿನ್ 30 ಇ.ಸಿ. ಕಳೆನಾಶಕವನ್ನು ಸಾಕಷ್ಟು ತೇವಾಂಶವಿದ್ದಾಗ ಸಿಂಪಡಿಸಿ.

ಹೆಸರು ಇಳುವರಿ ಹೆಚ್ಚಿಸಲು 1. ಹೂವಾಡುವ ಮತ್ತು ಕಾಳು ಕಟ್ಟುವ ಸಮಯದಲ್ಲಿ ಶೇ. 1ರ 19:19:19 (10ಗ್ರಾಂ./ಲೀಟರ್ ನೀರಿಗೆ) ಅಥವಾ ಶೇ. 2ರ ಡಿ.ಎ.ಪಿ. (20 ಗ್ರಾಂ. ಪ್ರತಿ ಲೀಟರ್ ನೀರಿಗೆ) ಸಿಂಪರಣೆ ಮಾಡಬೇಕು.

**ಕೀಟ ನಿರ್ವಹಣೆ :**

**ಕಾಂಡ ನೊಣ :** ಸಿಂಪರಣೆ : ಬಿತ್ತಿದ 15 ದಿವಸದ ಬೆಳೆಗೆ ಇಮಿಡಾಕ್ಲೋಪಿಡ್ 17.8 ಎಸ್.ಎಲ್ @0.2 ಮಿ.ಲೀ./ಲೀ. ಅಥವಾ ಥೈಯೋಮಿಥಾಕ್ಸಾಮ್ @0.2 ಗ್ರಾಂ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

**ಕಾಯಿ ಕೊರೆಯುವ ಹುಳ :**

ಸಿಂಪರಣೆ : 0.5 ಮಿ.ಲೀ. ಫೆನವಲರೇಟ್ 20 ಇ.ಸಿ. ಅಥವಾ 2 ಮಿ.ಲೀ. ಕ್ವಿನಾಲ್‌ಫಾಸ್ 25 ಇ.ಸಿ./ಲೀ.ಗೆ ಬೆರೆಸಿ ಸಿಂಪರಿಸಿ.

**ಸಸ್ಯ ಹೇನು ಹಾಗೂ ಥ್ರಿಪ್ಸ್ :**

ಸಿಂಪರಣೆ : ಅಸಿಫೇಟ 1 ಗ್ರಾಂ ಅಥವಾ ಡೈಮಿಥೋಯೇಟ್ 30 ಇ.ಸಿ. 1.7 ಮಿ.ಲೀ. ಅಥವಾ ಮೋನೋಕ್ರೋಟೋಫಾಸ್ 36 ಎಸ್.ಎಲ್. 10 ಮಿ.ಲೀ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

**ರೋಗ ನಿರ್ವಹಣೆ :**

ಬೂದಿ ರೋಗ ಹಾಗೂ ಸರಕೊಸ್ಪೋರಾ ಎಲೆ ಚುಕ್ಕೆ ರೋಗ : ಸಿಂಪರಣೆ : ಕಾರ್ಬನಡೈಜಿಮ್ 50 ಡ.ಬ್ಲೂ. ಯ. ಪಿ. 1 ಗ್ರಾಂ. ಅಥವಾ ಹೆಕ್ಸಾಕೋನಾಜೋಲ್ 5 ಇ.ಸಿ / ಲೀ ಬೆರೆಸಿ ಸಿಂಪರಿಸಿ.

ನೀರು ನಿರ್ವಹಣೆ 1 ಅಥವಾ 2 ಬಾರಿ ತೆಳುವಾಗಿ ಹೂವಾಡುವ ಮತ್ತು ಕಾಳು ಕಟ್ಟುವ ಹಂತದಲ್ಲಿ ಕಟಾವು 65–67 ದಿನಗಳಲ್ಲಿ.

ಇಳುವರಿ : (ಎಕರೆಗೆ) 5–6 ಕ್ವಿಂಟಾಲ್ (ಮಳೆಯಾಶ್ರಿತ) 7.8 ಕ್ವಿಂಟಾಲ್ ನೀರಾವರಿ.